ಸುತ್ತುಮುತ್ತಲಿನ ವಾತಾವರಣವನ್ನು ಕ್ಲೀನ್ ಆಗಿ ಇಟ್ಟುಕೊಳ್ಳಬೇಕು ಮುಂತಾದ ಕ್ರಮಗಳನ್ನು ತೆಗೆದುಕೊಳ್ಳಲು ನಗರಸಭೆಯವರಿಗೆ, ಜಿಲ್ಲಾಧಿಕಾರಿಯವರಿಗೆ ಸೂಚಿಸಲಾಗಿದೆ. ರೋಗದಿಂದ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ ಚಿಕಿತ್ಸಾ ಕ್ರಮ ಮತ್ತು ಮುಂಜಾಗೃತಾ ಕ್ರಮವನ್ನು ಜರುಗಿಸಲು ಸೂಚಿಸಲಾಗಿದೆ. ನಾನು ಕೂಡ ಅಲ್ಲಿಗೆ ಭೇಟಿ ನೀಡಲು ಹೋಗುತ್ತಿದ್ದೇನೆ. ಸರಕಾರವು ಈ ಬಗ್ಗೆ ವಿಶೇಷ ಕಾಳಜಿ ವಹಿಸಿ ಎಲ್ಲಾ ಎಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ತಮ್ಮ ಮೂಲಕ ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಮಾನ್ಯ ಸದಸ್ಯರುಗಳ ಮಾರ್ಗದರ್ಶನ ಮತ್ತು ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ ಯಾವ ತರಹದ ಅನಾಹುತಗಳು ಸಹ ನಡೆಯದಿರುವಂತೆ ನೋಡಿಕೊಳ್ಳುತ್ತೇವೆ ಎಂಬ ಭರವಸೆಯನ್ನು ನಾನು ಕೊಡಬಯಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಸರಕಾರದ ಆಡಳಿತ ಯಂತ್ರವು ಉತ್ತರ ಕರ್ನಾಟಕ ಭಾಗದಲ್ಲಿ ಸದಾ ಕಾಲವೂ ಅಲರ್ಟ್ ಆಗಿರಬೇಕು. ಧಾರವಾಡ - ಹುಬ್ಬಳ್ಳಿ ಬಗ್ಗೆ ಮಾನ್ಯ ಕಾರ್ಮಿಕ ಸಚಿವರಾದ ಹಿಂಡಸಗೇರಿಯವರು ಹೇಳಿದ್ದಾರೆ. ಮಾನ್ಯ ಆರೋಗ್ಯ ಸಚಿವರು ಹಾಗೂ ಮಾನ್ಯ ಸಭಾನಾಯಕರು ಇಲ್ಲಿ ಇಲ್ಲದಿರುವುದರಿಂದ ಮಾನ್ಯ ಖರ್ಗೆಯವರು ಹೇಳಬೇಕು. ಬೆಳಗಾವಿಯಲ್ಲಿ 108 ಜನರು ಆಸ್ಪತ್ರೆ ಸೇರಿದ್ದಾರೆ. ಹುಬ್ಬಳ್ಳಿಯಲ್ಲಿ 120 ಜನರು ಆಸ್ಪತ್ರೆಯಲ್ಲಿದ್ದಾರೆ. ನಿನ್ನೆ ಎಂಟು ಜನರು ಸತ್ತಿದ್ದಾರೆ. ಈ ಬಗ್ಗೆ ಆಡಳಿತ ಯಂತ್ರವನ್ನು ಅಲರ್ಟ್ ಮಾಡಿರಬೇಕೆಂದು ಸರಕಾರವನ್ನು ನಾನು ಒತ್ತಾಯ ಮಾಡಬಯಸುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ: ಮಾನ್ಯ ಅಧ್ಯಕ್ಷರೇ, ಅಡ್ಮಿಟ್ ಆಗಿರುವ ರೋಗಿಗಳು ಯಾವ್ಯಾವ ಗ್ರಾಮಗಳಿಂದ ಬಂದಿದ್ದಾರೆ. ಯಾವ್ಯಾವ ತಾಲ್ಲೂಕಿನಿಂದ ಬಂದಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕು. ತದನಂತರ ತಾಲ್ಲೂಕು ಯಾವುವು ಎಂಬುದನ್ನು ನೋಡಿ ಆ ಪ್ರದೇಶಗಳಲ್ಲಿ ತೀವ್ರವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಆಗ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡು ರೋಗವನ್ನು ತಡೆಯಲು ಸಾಧ್ಯವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಎಚ್ಚರಗೊಳಿಸತಕ್ಕಂಥ ಕೆಲಸವನ್ನು ಮಾಡುತ್ತೇವೆ. ಸಂಬಂಧಪಟ್ಟಂಥ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ತಿಳುವಳಿಕೆಯನ್ನು ಕೊಡುತ್ತೇವೆ.

(ಆ) ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಪತ್ರಕರ್ತರ ಮೇಲೆ ಹಲ್ಲೆ.

ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಒಂದು

ಘಟನೆಯಾಯಿತು. 7ನೇ ತಾರೀಖಿನಂದು ಬೆಂಗಳೂರಿನ ಒಬ್ಬ ಪತ್ರಕರ್ತರ ಮೇಲೆ ಅಲ್ಲಿ ಹಲ್ಲೆಯಾಯಿತು. ಅದನ್ನು ಅಲ್ಲಿನ ಬ್ಲಾಕ್ ಕಾಂಗ್ರೆಸ್‌ನ ಜನರಲ್ ಸೆಕ್ರೆಟರಿ ಮಾಡಿದ್ದಾರೆ ಎಂದು ಇದೆ. ಅವರ ಜೊತೆಗೆ ಅವರ ಸಹಚರರು ಇದ್ದಾರೆ ಎಂದು ತಿಳಿದು ಬರುತ್ತದೆ. ಇದಾದ ಮೇಲೆ ಪೋಲೀಸ್‌ರವರು ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಆ ಊರಿನವರು ಪೋಲೀಸ್‌ನವರು ಅವರ ಮೇಲೆ ಕ್ರಮ ಜರುಗಿಸಿಲ್ಲವೆಂದು ಹೇಳಿ ಗಲಾಟೆ ಮಾಡಿದ ಮೇಲೆ ಅವರನ್ನು ಅರೆಸ್ಟ್ ಮಾಡಿದರು. ಆ ತಪ್ಪಿತಸ್ಥರನ್ನು ಅರೆಸ್ಟ್ ಮಾಡಿ ಪೆರೇಡ್ ಮಾಡಬೇಕೆಂದು ಜನರು ಹೇಳಿದ ಮೇಲೆ ಅದನ್ನು ಮಾಡಿಲ್ಲವಾದ ಕಾರಣ ಅಲ್ಲಿ ಒಂದು ದೊಡ್ಡ ಗಲಾಟೆಯಾಗಿ ಲಾಟಿ ಚಾರ್ಜ್ ಆಯಿತು ಮತ್ತು ಟಿಯರ್‌ಗ್ಯಾಸ್ ಹಾರಬೇಕಾಯಿತು. ಅದಾದ ಮೇಲೆಯೂ ನಿರಂತರವಾಗಿ ಅಲ್ಲಿ ಗಲಾಟೆ ನಡೆಯುತ್ತಾ ಇದೆ. ನಿರಪರಾಧಿಗಳಿಗೆ ತೊಂದರೆಯಾಗುತ್ತಿದೆ. ಹೀಗಾಗಿ ಅಲ್ಲಿ ಜನರು ನೆಮ್ಮದಿಯಿಂದ ಇಲ್ಲ. ಕಂಪ್ಲಿ ಗ್ರಾಮದಲ್ಲಿ ದಲಿತರ ಸಂಖ್ಯೆ ಜಾಸ್ತಿಯಿರುವುದರಿಂದ ಅಮಾಯಕರನ್ನು ಕೂಡ ಬೀದಿಗೆಳೆದು ಗಲಾಟೆ ಮಾಡುವುದು, ಅರೆಸ್ಟ್ ಮಾಡಿಕೊಂಡು ಹೋಗುವುದು ಮುಂತಾಗಿ ಘಟನೆಗಳು ನಡೆಯುತ್ತಿದೆ ಎಂದು ಅಲ್ಲಿನ ನಿವಾಸಿಗರು ಫೋನ್ ಮಾಡಿದಾಗ ತಿಳಿಸಿದ್ದಾರೆ. ಅಲ್ಲಿನ ಸ್ಥಳೀಯ ಪೋಲೀಸ್ ಸಿಬ್ಬಂದಿಯವರು ಎಸ್‌ಐ, ಎಎಸ್‌ಐ, ಮುಂತಾಗಿ ಎಲ್ಲರೂ ಆ ಬ್ಲಾಕ್ ಕಾಂಗ್ರೆಸ್ ಸೆಕ್ರೆಟರಿ ಮತ್ತು ಅವರ ಕಾರ್ಯಕರ್ತರೊಂದಿಗೆ ಸಹಕರಿಸುತ್ತಿದ್ದಾರೆಂದು ತಿಳಿದು ಬರುತ್ತದೆ. ಆದಕಾರಣ ಮಾನ್ಯ ಗೃಹಸಚಿವರು ಈ ಒಂದು ಘಟನೆಯ ಬಗ್ಗೆ ಕೂಡಲೇ ಸೂಕ್ತ ಕ್ರಮವನ್ನು ತೆಗೆದುಕೊಂಡು ದಲಿತರ ಮೇಲೆ ಏನು ಪೋಲೀಸರಿಂದ ಕಿರುಕುಳ ನಡೆಯುತ್ತಿದೆ ಅದನ್ನು ತಡೆಗಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹಸಚಿವರು): ಮಾನ್ಯ ಅಧ್ಯಕ್ಷರೇ, ದಿನಾಂಕ:7-4-2000 ಮತ್ತು 8-4-2000 ರಂದು ಬಳ್ಳಾರಿ ಜಿಲ್ಲೆಯ ಕಂಪ್ಲಿ ಪಟ್ಟಣದಲ್ಲಿ ನಡೆದ ಘಟನೆಗಳಲ್ಲಿ ಪೋಲೀಸರಿಂದ ದಲಿತರ ಮೇಲೆ ದೌರ್ಜನ್ಯ ಕಿರುಕುಳ ನಡೆದಿರುವುದಿಲ್ಲ. ಒಬ್ಬ ಪತ್ರಕರ್ತನ ಮೇಲೆ ನಡೆದ ಹಲ್ಲೆಯ ವಿಷಯದಲ್ಲಿ ನಾಲ್ಕು ಪ್ರಕರಣಗಳನ್ನು ದಾಖಲು ಮಾಡಿ 33 ಜನರನ್ನು ಬಂಧಿಸಲಾಗಿದೆ. ಈ 33 ಜನರಲ್ಲಿ 9 ಜನರು ದಲಿತರಿದ್ದಾರೆ. ಇನ್ನುಳಿದ 4 ಜನ ದಲಿತರು ನ್ಯಾಯಾಲಯದ ಮುಂದೆ ಶರಣಾಗಿದ್ದಾರೆ. ಈ ವಿಷಯದಲ್ಲಿ ಅಪರಾಧ ಸಂಖ್ಯೆ 6-7, 2000, 68-2000 : 69-2000 : 70-2000 ಒಟ್ಟು ನಾಲ್ಕು ಪ್ರಕರಣಗಳನ್ನು ದಾಖಲು ಮಾಡಲಾಗಿದೆ.

ಇಂಥ ತಪ್ಪು ಮಾಡುವ ಕೆಲಸದಲ್ಲಿ ಯಾವ ಪಕ್ಷದವರೇ ಇರಲಿ, ಕಾಂಗ್ರೆಸ್, ಜನತಾದಳ, ಬಿಜೆಪಿ, ಮುಂತಾಗಿ ಯಾರೇ ಇರಲಿ, ಯಾರಿದ್ದರೂ ಅವರನ್ನು ಸರಕಾರವು ಮುಚ್ಚಿಡುವುದಿಲ್ಲ. ಯಾರು ತಪ್ಪು ಮಾಡಿದ್ದರೋ ಅವರ ಮೇಲೆ ಕಾನೂನು ಪ್ರಕಾರ ಕ್ರಮ ಜರುಗಿಸುತ್ತೇನೆ. ಯಾವ ಪಕ್ಷ ಬೇಧವಿಲ್ಲದೆ ಈ ಕ್ರಮವು ನಡೆದಿದೆ.